ದಿನಾಂಕ 29-3-2016 ರಂದು ಬೆಳಿಗ್ಗೆ 11.00 ಗಂಟೆಗೆ ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತಾರನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಪ್ರಿಯಾಂಕ ಎಂ. ಖರ್ಗೆ | ಸದಸ್ಯರು |
| 3. | ಡಾ. ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 4. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 5. | ಡಾ. ಎ. ನಾಗನಗೌಡ | ಸದಸ್ಯರು |
| 6. | ಶ್ರೀ ಕೆ.ಎಂ. ವೀರಯ್ಯ | ಸದಸ್ಯರು |
| 7 | ಡಾ. ಡಿ.ಎಂ. ಚಂದರಗಿ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತಾರನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| 1 | **ದಿನಾಂಕ 11-1-2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೈದನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 11-1-2016 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೈದನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು **(ಕ್ರಮ: ಕುಲಸಚಿವರು)** |
| 2 | **ದಿನಾಂಕ 11-1-2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೈದನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ದಿನಾಂಕ 11-1-2016 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೈದನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಅನುಕ್ರಮ ಸಂ. 4.5 ಗೆ ಸಂಬಂಧಿಸಿದಂತೆ ತಾಂತ್ರಿಕ ಮಂಜೂರಾತಿ ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಏಕಕಾಲದಲ್ಲಿಯೇ ಕೈಗೊಳ್ಳಲು ಸಲಹೆ ನೀಡಲಾಯಿತು ಹಾಗೂ ಅನುಕ್ರಮ ಸಂ. 5.1 ಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರಾದ ಶ್ರೀ ಪ್ರವೀಣ ವಿ. ನಾಯಕ್ ಅವರು ಸಿವಿಲ್ ಕಾಮಗಾರಿಗಳಲ್ಲಿ ಪ್ರಗತಿ ಆಗದೇ ಇರುವ ಬಗ್ಗೆ ವಿಚಾರಿಸಿದರು ಹಾಗೂ ಕಲಬುರಗಿ ಆವರಣದಲ್ಲಿ ಕಳೆದ 3 ತಿಂಗಳುಗಳಿಂದ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ವರದಿಯನ್ನು ತರಿಸಿಕೊಳ್ಳಲು ತಿಳಿಸುತ್ತಾ ಪಿ.ಡಬ್ಲ್ಯೂ.ಡಿ. ಇಲಾಖೆಯ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರನ್ನು ನಿಯೋಜಿಸುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸಲಹೆ ನೀಡಿದರು. **(ಕ್ರಮ: ಕುಲಸಚಿವರು/ಕಾರ್ಯನಿರ್ವಾಹಕ ಅಭಿಯಂತರರು)** |
| 3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು **(ಕ್ರಮ: ಕುಲಸಚಿವರು)** |

| | |
|---|---|
| 4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು<br>**(ಕ್ರಮ : ಕುಲಸಚಿವರು)** |
| 5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ/ಬಹುಮಾನಗಳನ್ನು ನೀಡುವ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ 20 ಕೃವಿವಿ ಬಂಗಾರದ ಪದಕಗಳು ಮತ್ತು 2 ದಾನಿಗಳ ಬಂಗಾರದ ಪದಕಗಳು, ಸ್ನಾತಕ ವಿದ್ಯಾರ್ಥಿಗಳಿಗಾಗಿ 4 ಕೃವಿವಿ ಬಂಗಾರದ ಪದಕಗಳು, 13 ದಾನಿಗಳ ಬಂಗಾರದ ಪದಕಗಳು ಹಾಗೂ 2 ನಗದು ಬಹುಮಾನ / ಬಹುಮಾನಗಳನ್ನು ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿಯ ಅರ್ಹ ಅಭ್ಯರ್ಥಿಗಳಿಗೆ ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು **(ಕ್ರಮ : ಕುಲಸಚಿವರು)** |
| 6 | **ಕರ್ನಾಟಕ ರಾಜ್ಯ ಹೈ–ಟೆಕ್ ಕೃಷಿ ಉಪಕರಣಗಳ ತಯಾರಕರ, ವಿತರಕರ ಹಾಗೂ ಡೀಲರ್‌ಗಳ ಅಸೋಸಿಯೇಶನ್ (ರಿ) ಚಿತ್ರದುರ್ಗ ಇವರ ಹೆಸರಿನಲ್ಲಿ ಬಂಗಾರದ ಪದಕವನ್ನು ಸ್ಥಾಪಿಸುವ ಕುರಿತು**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕರ್ನಾಟಕ ರಾಜ್ಯ ಹೈ–ಟೆಕ್ ಕೃಷಿ ಉಪಕರಣಗಳ ತಯಾರಕರ, ವಿತರಕರ ಹಾಗೂ ಡೀಲರ್‌ಗಳ ಅಸೋಸಿಯೇಶನ್ (ರಿ) ಚಿತ್ರದುರ್ಗ ಇವರ ಹೆಸರಿನಲ್ಲಿ ಬಂಗಾರದ ಪದಕವನ್ನು ಆರನೇಯ ಘಟಿಕೋತ್ಸವದಿಂದಲೇ ಪ್ರಾರಂಭವಾಗುವಂತೆ ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ದಾನಿಗಳ ಬಂಗಾರದ ಪದಕಗಳ ಸಂಬಂಧ ಇರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಒಂದು ಸಮಿತಿಯನ್ನು ರಚಿಸಲು ಘನ ವೇದಿಕೆಯು ಸಲಹೆ ನೀಡಿತು. ಬಂಗಾರದ ಪದಕ ನೀಡುವ ವಿಚಾರದಲ್ಲಿ ವಿಶ್ವವಿದ್ಯಾಲಯವು ತನ್ನ ಹಕ್ಕನ್ನು ಬಳಸುವಂತೆ ಅಭಿಪ್ರಾಯ ವ್ಯಕ್ತಪಡಿಸಿತು ಹಾಗೂ ಠೇವಣಿ ಮೊತ್ತವನ್ನು ಹೆಚ್ಚಿಸಲು ಸಲಹೆ ನೀಡಲಾಯಿತು. **(ಕ್ರಮ : ಕುಲಸಚಿವರು)** |
| 7 | **ಕೃಷಿ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದವರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಅನುಮೋದನೆ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಮಾನ್ಯ ರಾಜ್ಯಪಾಲ್ ಅನುಮೋದನೆ ದೊರೆತ ನಂತರ ಕೃಷಿ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದವರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. **(ಕ್ರಮ : ಕುಲಸಚಿವರು)** |
| 8 | **ಡಾಕ್ಟರಲ್ ಪದವಿ ಕಾರ್ಯಕ್ರಮಕ್ಕಾಗಿ ಕೃವಿವಿ ರಾಯಚೂರಿನಲ್ಲಿ (ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ) ಏಕರೂಪದ ಪ್ರವೇಶ ಪ್ರಕ್ರಿಯೆ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಡಾಕ್ಟರಲ್ ಪದವಿ ಪ್ರವೇಶ ಕಾರ್ಯಕ್ರಮಕ್ಕಾಗಿ ಕೃವಿವಿ ಬೆಂಗಳೂರನ್ನು ಸಂಯೋಜಕ ವಿಶ್ವವಿದ್ಯಾಲಯವನ್ನಾಗಿಸಿ, 2016–17 ರ ಶೈಕ್ಷಣಿಕ ವರ್ಷಕ್ಕೆ (ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ) |

| | |
|---|---|
| | ಏಕರೂಪದ ಪ್ರವೇಶ ಪ್ರಕ್ರಿಯೆ ಕೈಗೊಳ್ಳಲು ಘನ ವೇದಿಕೆಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು / ಡೀನ್(ಸ್ನಾತಕೋತ್ತರ)) |
| 9 | **ಕೃವಿವಿ ರಾಯಚೂರಿನ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯಕ್ಕೆ ಸಲಹೆಗಾರರೆಂದು ಡಾ. ಎ.ಯು. ಏಕಬೋಟೆ, ನಿರ್ದೇಶಕರು (ನಿವೃತ್ತ), ಪೀಡೆನಾಶಕಗಳ ನಿರ್ವಹಣೆ ವಿಭಾಗ, ಎನ್‌ಐಪಿಎಚ್‌ಎಂ, ಹೈದ್ರಾಬಾದ್ ಅವರ ಸೇವೆಯನ್ನು ಪಡೆಯುವ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯವನ್ನು ಮುಂದೂಡಲು ತೀರ್ಮಾನಿಸಿತು ಹಾಗೂ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯ ಪ್ರಾರಂಭದ ಬಗ್ಗೆ ಹಾಗೂ ಮುಕ್ತಾಯಗೊಳ್ಳುವ ಕುರಿತು ಹಾಗೂ ಎಷ್ಟು ಅವಧಿಯವರೆಗೆ ಪರಿಣಿತ ಸಲಹೆಗಾರರ ಅವಶ್ಯಕತೆವಿರುವ ಬಗ್ಗೆ ವರದಿ ನೀಡುವಂತೆ ಸಲಹೆ ನೀಡಲಾಯಿತು.<br>(ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು) |
| 10 | **ಕೃವಿವಿ ರಾಯಚೂರಿನ ವಿವಿಧ ಆವರಣಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಗುಣವತ್ತತೆಯ ಪರಿಶೀಲನೆಯನ್ನು ಪರಿಣಿತ ಸಿವಿಲ್ ಇಂಜಿನಿಯರ್ ರವರಿಂದ ಕೈಗೊಳ್ಳುವುದಕ್ಕಾಗಿ ಗೌರವಧನ ನೀಡಲು ಅನುಮೋದನೆ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯವನ್ನು ಮುಂದೂಡಲು ತೀರ್ಮಾನಿಸಿತು ಹಾಗೂ ಸರಕಾರವು ಇದೇ ರೀತಿಯ ಸಲಹೆಗಾರರ ಚಟುವಟಿಕೆಗಳಿಗಾಗಿ ಗೌರವಧನ ನೀಡಲು ಇರುವ ಮಾರ್ಗಸೂಚಿಗಳನ್ನು ಪಡೆಯಲು ಸಲಹೆ ನೀಡಿತು. ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀ ಪ್ರಿಯಾಂಕ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಮತ್ತು ಇಬ್ಬರು ಮಾನ್ಯ ಸದಸ್ಯರು ಹಾಗೂ ಕಾನೂನು ಮತ್ತು ಹಣಕಾಸು ವಿಭಾಗದಿಂದ ತಲಾ ಒಬ್ಬರು ಸದಸ್ಯರನ್ನೊಳಗೊಂಡ ಒಂದು ಉಪಸಮಿತಿಯನ್ನು ರಚಿಸಿ ಕರಡು ವರದಿಯನ್ನು ಪರಾಮರ್ಶಿಸಲು ಹಾಗೂ ಅಂತಿಮಗೊಳಿಸಿದ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಘನ ವೇದಿಕೆಗೆ ಮಂಡಿಸಲು ಸಹ ಸಲಹೆ ನೀಡಲಾಯಿತು.<br>(ಕ್ರಮ: ಕುಲಸಚಿವರು) |
| 11 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸಹಾಯಕ ಅಭಿಯಂತರರ (ಕೃಷಿ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಮುಂಬಡ್ತಿ ಸೌಲಭ್ಯವನ್ನು ಕಲ್ಪಿಸುವ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಮುಂಬರುವ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಸರಕಾರದ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರ ಉಪಸ್ಥಿತಿಯಲ್ಲಿ ಸದರಿ ಪ್ರಸ್ತಾವನೆಯನ್ನು ಪುನ: ಮಂಡಿಸುವ ಸಲಹೆಯೊಂದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಈ ವಿಷಯವನ್ನು ಮುಂದೂಡಲು ತೀರ್ಮಾನಿಸಿತು.<br>(ಕ್ರಮ : ಕುಲಸಚಿವರು) |
| 12 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕ ಹಾಗೂ ಶಿಕ್ಷಕೇತರ ಹುದ್ದೆಗಳಿಗೆ ನೇಮಕಾತಿಗಾಗಿ 1:5 (ರಿಕ್ತ ಸ್ಥಾನ : ಅಭ್ಯರ್ಥಿಗಳು) ಅನುಪಾತವನ್ನು ನಿಗದಿಪಡಿಸುವ ಕುರಿತು**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕ ಹಾಗೂ ಶಿಕ್ಷಕೇತರ ಹುದ್ದೆಗಳಿಗೆ ನೇಮಕಾತಿಗಾಗಿ 1:5 (ರಿಕ್ತ ಸ್ಥಾನ : ಅಭ್ಯರ್ಥಿಗಳು) ಅನುಪಾತವನ್ನು ನಿಗದಿಪಡಿಸುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ: ಕುಲಸಚಿವರು) |

| | |
|---|---|
| 13 | **ಗ್ರೂಪ್–ಸಿ ಹುದ್ದೆಗಳ ನೇಮಕಾತಿಗೆ ಸಂದರ್ಶನ ಕಾರ್ಯಕ್ಷಮತೆ ಅಂಕಗಳನ್ನು ತೆಗೆದುಹಾಕಿ ರಾಜ್ಯದ ಎಲ್ಲ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಸ್ಕೋರ್‌ಕಾರ್ಡುಗಳನ್ನು ಅಳವಡಿಸಿಕೊಳ್ಳುವ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಗ್ರೂಪ್–ಸಿ ಹುದ್ದೆಗಳ ನೇಮಕಾತಿಗೆ ಸಂದರ್ಶನ ಕಾರ್ಯಕ್ಷಮತೆ ಅಂಕಗಳನ್ನು ತೆಗೆದುಹಾಕಿ ರಾಜ್ಯದ ಎಲ್ಲ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಸ್ಕೋರ್‌ಕಾರ್ಡುಗಳನ್ನು ಅಳವಡಿಸಿಕೊಳ್ಳುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. **(ಕ್ರಮ: ಕುಲಸಚಿವರು)** |
| 14 | **ಕೃವಿವಿ, ರಾಯಚೂರಿನಲ್ಲಿ ಜಾಹೀರಾತುಗೊಳಿಸಲಾದ ಗ್ರೂಪ್–ಡಿ ಹುದ್ದೆಗಳನ್ನು ಹಿಂಪಡೆಯಲು ಹಾಗೂ ಅಭ್ಯರ್ಥಿಗಳಿಂದ ಪಡೆದ ಅರ್ಜಿ ಶುಲ್ಕವನ್ನು ಹಿಂತಿರುಗಿಸಲು ಅನುಮೋದನೆ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕೃವಿವಿ, ರಾಯಚೂರಿನಲ್ಲಿ ಜಾಹೀರಾತುಗೊಳಿಸಲಾದ ಗ್ರೂಪ್–ಡಿ ಹುದ್ದೆಗಳನ್ನು ಹಿಂಪಡೆಯಲು ಹಾಗೂ ಅಭ್ಯರ್ಥಿಗಳಿಂದ ಪಡೆದ ಅರ್ಜಿ ಶುಲ್ಕವನ್ನು ಹಿಂತಿರುಗಿಸಲು ಘನ ವೇದಿಕೆಯು ಅನುಮೋದನೆ ನೀಡಿತು. ಗ್ರೂಪ್–ಡಿ ಹುದ್ದೆಗಳ ಕಾರ್ಯಗಳಿಗಾಗಿ ಹೊರಗುತ್ತಿಗೆಯನ್ನು ಪಡೆಯಲು ಸಲಹೆ ನೀಡಲಾಯಿತು. **(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)** |
| 15 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಅಧಿಕಾರಿಗಳು ಮತ್ತು ಶಿಕ್ಷಕ / ವಿಜ್ಞಾನಿ ಸಿಬ್ಬಂದಿಗಳವರ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಅಧಿಕಾರಿಗಳು ಮತ್ತು ಶಿಕ್ಷಕ / ವಿಜ್ಞಾನಿ ಸಿಬ್ಬಂದಿಗಳವರ ನೇಮಕಾತಿ ಮಾಡಿಕೊಳ್ಳಲು ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| 16 | **ಸುಜಲ ಯೋಜನೆಯಡಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸಿದ ಕ್ರಮಕ್ಕೆ ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣ "Pressure Plate Membrane Apparatus" ಅನ್ನು ಸುಜಲ ಯೋಜನೆಯಡಿ ಖರೀದಿಸಲು ಪ್ರಾರಂಭಿಸಿದ ಪ್ರಕ್ರಿಯೆಗೆ ಘನ ವೇದಿಕೆಯು ಅನುಮೋದನೆ ನೀಡಿ ವಿಶ್ವವಿದ್ಯಾಲಯವು ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿತು.<br><br>**(ಕ್ರಮ: ಸರಕು ಖರೀದಿ ಅಧಿಕಾರಿ)** |
| 17 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಈಶಾನ್ಯ ಭಾರತದ ವಿವಿಧ ಪ್ರದೇಶಗಳಲ್ಲಿರುವ ಕೃಷಿ ಸಂಶೋಧನಾ ಸಂಸ್ಥೆಗಳಿಗೆ ಭೇಟಿ ನೀಡುವ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಈಶಾನ್ಯ ಭಾರತದ ವಿವಿಧ ಪ್ರದೇಶಗಳಲ್ಲಿರುವ ಕೃಷಿ ಸಂಶೋಧನಾ ಸಂಸ್ಥೆಗಳಿಗೆ ಭೇಟಿ ನೀಡುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. **(ಕ್ರಮ: ಕುಲಸಚಿವರು)** |

| | |
|---|---|
| 18 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಸಿಕ ವೇತನ ನೌಕರರನ್ನು ಸಕ್ರಮಾತಿಗೊಳಿಸಲು ಅನುಮೋದನೆ ಕುರಿತು**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಮುಂಬರುವ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಸರಕಾರದ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರ ಉಪಸ್ಥಿತಿಯಲ್ಲಿ ಸದರಿ ಪ್ರಸ್ತಾವನೆಯನ್ನು ಪುನ: ಮಂಡಿಸುವ ಸಲಹೆಯೊಂದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಈ ವಿಷಯವನ್ನು ಮುಂದೂಡಲು ತೀರ್ಮಾನಿಸಿತು.<br>**(ಕ್ರಮ : ಕುಲಸಚಿವರು)** |
| 19 | **ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿ ಕುರಿತು**<br>**ಠರಾವು:**<br>ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ ಎ.ಜಿ.ಪಿ. ರೂ. 7000 ಕ್ಕೆ (07 ಶಿಕ್ಷಕರುಗಳಿಗೆ) ಎ.ಜಿ.ಪಿ. ರೂ. 7000 ರಿಂದ ಎ.ಜಿ.ಪಿ. ರೂ. 8000 ಕ್ಕೆ (01 ಶಿಕ್ಷಕರಿಗೆ), ಎ.ಜಿ.ಪಿ. ರೂ. 8000 ರಿಂದ ಎ.ಜಿ.ಪಿ. ರೂ. 9000 ಕ್ಕೆ (01 ಶಿಕ್ಷಕರಿಗೆ) ಹಾಗೂ ಎ.ಜಿ.ಪಿ. ರೂ. 9000 ರಿಂದ ಎ.ಜಿ.ಪಿ. ರೂ. 10000 ಕ್ಕೆ (19 ಶಿಕ್ಷಕರುಗಳಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರ ಮುಂಬಡ್ತಿ ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| | **ADDITIONAL ITEMS** |
| 1 | **ಅಭ್ಯರ್ಥಿಗಳಿಂದ ಸಂಗ್ರಹಿಸಲಾದ ನೇಮಕಾತಿ ಅರ್ಜಿ ಶುಲ್ಕದೊಂದಿಗೆ ಬ್ಯಾಂಕ್ ಕಮೀಷನ್ ಮೊತ್ತವನ್ನು ಪಾವತಿಸದೇ ಇರುವುದಕ್ಕೆ ಅದನ್ನು ಮನ್ನಾ ಮಾಡಲು ಅನುಮೋದನೆ ಕುರಿತು**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಸ್ಪಷ್ಟವಾದ ನಿರ್ದೇಶನಗಳನ್ನು ಹಾಗೂ ನೆನಪೋಲೆಗಳನ್ನು ಕೃವಿವಿ ವೆಬ್‌ಸೈಟ್‌ನ ಮುಖಾಂತರ ಜಾಹಿರುಗೊಳಿಸಿದರೂ ಸಹ ಅಬ್ಯರ್ಥಿಗಳು ನೇಮಕಾತಿ ಅರ್ಜಿ ಶುಲ್ಕದೊಂದಿಗೆ ಬ್ಯಾಂಕ್ ಕಮೀಷನ್ ಮೊತ್ತವನ್ನು ಪಾವತಿಸದೇ ಇರುವುದಕ್ಕೆ ಅಭ್ಯರ್ಥಿಗಳಿಂದ ಸಂಗ್ರಹಿಸಲಾದ ಬ್ಯಾಂಕ್ ಕಮೀಷನ್ ಮೊತ್ತ ರೂ. 79,850/– ಮತ್ತು ರೂ. 11,913/– ಗಳನ್ನು ಮನ್ನಾ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು/ ಹಣಕಾಸು ನಿಯಂತ್ರಣಾಧಿಕಾರಿಗಳು)** |
| 2 | **ಮಣ್ಣು ಆರೋಗ್ಯ ಅಭಿಯಾನ ಯೋಜನೆಯಡಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸಿದ ಕ್ರಮಕ್ಕೆ ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಮಣ್ಣು ಆರೋಗ್ಯ ಅಭಿಯಾನ ಯೋಜನೆಯಡಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಮರು–ಟೆಂಡರ್ ಕರೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br>**(ಕ್ರಮ: ಸಂಶೋಧನ ನಿರ್ದೇಶಕರು / ಸರಕು ಖರೀದಿ ಅಧಿಕಾರಿ)** |
| 20 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು**<br>**ಠರಾವು:**<br>➢ ಜಿಲ್ಲಾ ಆರೋಗ್ಯಾಧಿಕಾರಿಗಳವರಿಂದ ಪರಿಶೀಲನೆ ಹಾಗೂ ಮೇಲುರುಜು ಆದ ಈ ಕೆಳಕಂಡ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗಾಗಿ ಘನ ವೇದಿಕೆಯು ಅನುಮೋದನೆ ನೀಡಿತು. |

| ಕ್ರ.ಸಂ. | ಸಿಬ್ಬಂದಿಯ ಹೆಸರು | ಮರುಪಾವತಿಗಾಗಿ ಅಂಗೀಕರಿಸಿದ ಮೊತ್ತ (ರೂ.) |
|---|---|---|
| 1 | ಶ್ರೀ ಎಸ್.ಆರ್. ದೊಡ್ಡನಗೌಡರ್, ಸಹಾಯಕ ಪ್ರಾಧ್ಯಾಪಕ | 2,19,460/- |
| 2 | ಶ್ರೀ ಎಸ್.ಆರ್. ಬಾಲನಗೌಡರ್, ಸಹಾಯಕ ಪ್ರಾಧ್ಯಾಪಕ | 65,860/- |
| 3 | ಶ್ರೀ ರಾಘವೇಂದ್ರ, ಸಹಾಯಕ | 43,000/- |
| 4 | ಶ್ರೀ ಖಾಸಿಂ ಅಲಿ, ಹಿರಿಯ ಟ್ರ್ಯಾಕ್ಟರ್ ಚಾಲಕ | 1,24,860/- |

**(ಕ್ರಮ: ಕುಲಸಚಿವರು/ ಹಣಕಾಸು ನಿಯಂತ್ರಣಾಧಿಕಾರಿಗಳು)**

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/- 1-4-2016
**(ಪಿ.ಎಂ. ಸಾಲಿಮಠ)**
ಕುಲಪತಿಗಳು ಹಾಗೂ ಅಧ್ಯಕ್ಷರು
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಸಹಿ/- 1-4-2016
**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.